ಮಾಡೋಣವೆಂದು ಅಳುಕುತ್ತಲೇ ನರಸಯ್ಯ ಕೇಳಿದರೂ, 'ಆಯಮ್ಮ ಸಾಯೋಕ್ಕೆ ಮುಂಚೆ ಮಗುನ್ನ ಆನಾಡಿ ಹಂಬಲಿಸೀ ಹಂಬಲಿಸಿ ಸತ್ತಿದೆ. ಅಂತದ್ರಲ್ಲಿ ಅವನಿಗೆ ಮಕ ತೋರುಸ್ದೇ ಮಣ್ಣು ಮಾಡೋದು ಹೆಂಗೆ' ಎಂದು ಊರ ಹಿರೀಕರು ಹಿಂಜರಿಯುತ್ತಿದ್ದರು. ಮಣ್ಣು ಮಾಡುವ ಮೊದಲು ಆಕೆಗೂ ಮಗನಿಗೂ ಮುಖಾಮುಖಿ ಮಾಡಿಸಲೇಬೇಕೆಂಬ ಹಂಬಲಿಕೆಯೂ ಇಲ್ಲದಿರಲಿಲ್ಲ. ಅಣ್ಣ ನರಸಯ್ಯನಿಗೆ, ಆಕೆ ಸಾಯಲು ತಾನೇ ಕಾರಣ ಎಂಬ ಅಪರಾಧಿ ಭಾವ ಕಾಡುತ್ತಿದ್ದದ್ದರಿಂದ ಅವನು ಬರುವ ಮುನ್ನವೇ ಮುನ್ನುಗ್ಗಿ ಮಣ್ಣು ಮಾಡುವ ಧೈರ್ಯವೂ ಇರಲಿಲ್ಲ.

★ ★ ★

ಭಾಗ್ಯಮ್ಮನ ನಿಜವಾದ ಹೆಸರು ಭಾಗೀರತಿ. ಮದುವೆಯಾದ ಹೊಸತರಲ್ಲಿ ಗಂಡ ಅನ್ನುತ್ತಿದ್ದ 'ರತಿ' ಎಂಬ ಉತ್ತರಪದವನ್ನು ತನ್ನ ಓರಗೆಯ ಗಂಡಸರೂ ಅನ್ನುವುದನ್ನು ಸಹಿಸಲಾರದೇ, ಪೂರ್ವಪದವನ್ನು ಮಾತ್ರ ಬಳಸಿ ಭಾಗೀ, ಭಾಗ್ಯ, ಭಾಗ್ಯಮ್ಮನನ್ನಾಗಿ ಮಾಡಿಕೊಂಡಿದ್ದ. ಅದರಿಂದ ಅದೇನು ಭಾಗ್ಯ ಲಭಿಸಿತೋ ಗೊತ್ತಿಲ್ಲ, ಆದರೆ ಆರೇಳು ಮಕ್ಕಳನ್ನು ದಯಪಾಲಿಸಿದ ಗಂಡ ನೆಮ್ಮದಿಯಾಗಿ ಇಹಲೋಕ ತ್ಯಜಿಸಿ ಜವಾಬ್ದಾರಿಗಳಿಂದ ಪಲಾಯನ ಮಾಡಿದ್ದ. ಭಾಗ್ಯಮ್ಮ ಅವುಗಳನ್ನೆಲ್ಲ ಸಾಕಿ ಸಲಹಿ, ಮದುವೆ ಮಾಡಿ, ಅವರೆಲ್ಲರ ಬಾಣಂತನ ಮಾಡಿ ಸೋತು ಸುಣ್ಣವಾಗಿ ಹೋಗಿದ್ದಳು. ಅಂಥದರಲ್ಲೂ ಓದುವುದರಲ್ಲಿ ಸುಖ ಕಂಡುಕೊಂಡಿದ್ದ ಕೊನೆಯ ಮಗನ ಮೇಲೆ ಅಪಾರ ಪ್ರೀತಿ. 'ಅದೇನು ಓದ್ತೀಯೋ ಓದು ಮಗಾ, ನಾನು ಕೂಲಿನಾಲಿ ಮಾಡಿಯಾದ್ರೂ ನಿನ್ನ ಓದುಸ್ತೀನಿ' ಎಂದು ಪದೇಪದೆ ಹೇಳುತ್ತ ಧೈರ್ಯ ತುಂಬುತ್ತಿದ್ದಳು.

ಊರಿನಲ್ಲಿ ಶಾಲೆ ಕಟ್ಟಿಸಲು ಇಟ್ಟಿಗೆ ಹೊರುವಾಗ, ಕೆರೆಯ ಹೂಳು ತೆಗೆಯಲು ಹೋದಾಗ, ಗ್ರಾಮ್ ಸಡಕ್ ಯೋಜನೆಯ ರಸ್ತೆಯ ಮಣ್ಣು ಹೊರುವಾಗಲೆಲ್ಲ ಸರಿಯಾಗಿ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಎಂದು ಪರಿಶೀಲಿಸಲು ಠಾಕುಠೀಕಾಗಿ ಇನ್‌ಶರ್ಟ್–ಪ್ಯಾಂಟು ಹಾಕಿಕೊಂಡು ಸರ್ಕಾರಿ ಜೀಪಿನಲ್ಲಿ ಬರುತ್ತಿದ್ದ ಅಧಿಕಾರಿಗಳನ್ನು ಬಿಟ್ಟ ಕಣ್ಣು ಬಿಟ್ಟುಕೊಂಡು ನೋಡುತ್ತ, ಅವರೊಳಗೆ ತನ್ನ ಮಗನನ್ನು ಕಾಣುತ್ತಿದ್ದಳು. ಹಾಗೆ ಬಂದಾಗ ತನ್ನನ್ನೂ ಒಳಗೊಂಡು ಎಲ್ಲರೂ ತಾವು ಮಾಡದ ತಪ್ಪಿಗೆ ಯಾವ ಶಿಕ್ಷೆ ಕೊಟ್ಟುಬಿಡುತ್ತಾರೋ ಎಂದು ಥರಥರ ನಡುಗುತ್ತಿದ್ದರು. ತಮ್ಮನ್ನು ನಡುಗಿಸುತ್ತಿದ್ದ ಮೇಸ್ತ್ರಿ, ಕಾಂಟ್ರಾಕ್ಟರುಗಳೆಲ್ಲರ ಪಂಚೆ ಒದ್ದೆ ಮಾಡಿಸುತ್ತಿದ್ದುದನ್ನು ಕಣ್ಣಾರೆ ಕಂಡವಳು, ತನ್ನ ಮಗನೂ ಹೀಗೇ ಆಫೀಸರನಾದರೆ, ಎಂತೆಂಥ ಜನರನ್ನೆಲ್ಲ ನಡುಗಿಸಬಹುದು ಎಂದು ಕಲ್ಪಿಸಿಕೊಳ್ಳುತ್ತಿದ್ದಳು. 'ನನ್ನ ಮಗನೂ ಬಲೇ ಓದ್ತೌನೆ, ಅವುನ್ನೂ ಹಿಂಗೇ ಆಪೀಸರ್ನ ಮಾಡುಸ್ಬೇಕು ಕಣಣ್ಣೋ, ಅದುಕ್ಕೆ ಏನುನ್ನ ಓದ್ಬೇಕು ಅಂತ ನನ್ನ ಮಗುನ್ಗೂ ಸ್ವೊಲ್ಪ ಹೇಳಣ್ಣೋ' ಎಂದು ಮೇಸ್ತ್ರಿ ಎದುರು ದೀನಳಾಗುತ್ತಿದ್ದಳು. ಮಗನ ಓದಿನ ಸುಖದೆದುರು, ವಯಸ್ಸಾದ ತನ್ನ ಮೈಕೈ ನೋವುಗಳೆಲ್ಲ ಏನೇನೂ ಅಲ್ಲ ಎನ್ನಿಸುತ್ತಿತ್ತು. ರಾತ್ರಿಗೆ ಸುಸ್ತಾಗಿ ಬಂದು, ಅಡುಗೆ ಮಾಡಿ ಮಕ್ಕಳು ಮರಿಗೆಲ್ಲ ಬಡಿಸಿ ಹೆಣದಂತೆ ಮಲಗುವಾಗ ಹೊಡೆತ ಬರುತ್ತಿದ್ದ ಮೀನಖಂಡ, ತೊಡೆಗಳ ಮೇಲೆಲ್ಲ ತನ್ನ ಕಿರಿಮಗನನ್ನು ನಿಲ್ಲಿಸಿ ತುಳಿಸಿಕೊಂಡು ಅದರಲ್ಲೇ ಪರಮಸುಖ ಅನುಭವಿಸುತ್ತಿದ್ದಳು.

★ ★ ★

ಮತ್ತೊಮ್ಮೆ ಫೋನ್ ಮಾಡಿದ ನಿರಂಜನ, ಈಗ ಏರ್‌ಪೋರ್ಟಿಗೆ ಹೊರಟಿರುವುದಾಗಿಯೂ, ಇನ್ನೊಂದು ಹದಿನೆಂಟು–ಇಪ್ಪತ್ತು ಗಂಟೆಯೊಳಗೆ ಇಂಡಿಯಾಕ್ಕೆ ಬರುವುದಾಗಿಯೂ ತಿಳಿಸಿದ. ಓಡಿ ಬಂದು ಹೊರಟಿರುವ ತನ್ನ ಊರಿನ ಸಿವಿಲ್ ಬಸ್ಸನ್ನು ಹತ್ತಿದಂತೆ ಎಂದುಕೊಂಡಿದ್ದ ನರಸಯ್ಯ. ಆದರೆ ಬಡತನದಲ್ಲಿ ಓದಲೆಂದು ಹೊರಟುಬಂದಿರುವ ಹುಡುಗನಿಗೆ ತಕ್ಷಣದ ಫ್ಲೈಟ್‌ಗೆ ಟಿಕೆಟ್ ಕೊಳ್ಳುವಷ್ಟು ಸಾಮರ್ಥ್ಯ ಎಲ್ಲಿರಬೇಕು. ರೆಕ್ಕೆ ಅಂಟಿಸಿಕೊಂಡ ದೊಡ್ಡ ಮೆಟಡಾರ್‌ನಂತೆ ಕಾಣುತ್ತಿದ್ದ